**MVC 79-24** **RW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 09.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎದುರುದಾರ ಪರ ಶ್ರೀ / ಶ್ರೀಮತಿ S R G, ವಕೀಲರಿಂದಃ**

2. ಪಾಲಿಸಿ ಪ್ರತಿಯನ್ನು ಇಫ್ಕೋ ಟೋಕಿಯೋ ಜನರಲ್ ಇನ್ಸುರೆನ್ಸ ಪ್ರತಿ ಪಿ ಆರ್ ಬಿ ವಕೀಲರ ತಕರಾರಿನ ಮೇರೆಗೆ ನಿಆರ್ - 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರ ಪರ ಶ್ರೀಮತಿ ಪಿ ಆರ್ ಬಿ, ವಕೀಲರಿಂದಃ**

3. ಕಂಪನಿ ಪರವಾಗಿ ನಾನು ಮುಖ್ಯ ವಿಚಾರಣೆಗೆ ಮಾಹಿತಿ ನೀಡಿದ್ದೇನೆ. ವೈಯಕ್ತಿಕವಾಗಿ ಮಾಹಿತಿ ಇಲ್ಲ, ದಾಖಲೆಗಳ ಆಧಾರದ ಮೇಲೆ ಸಾಕ್ಷಿ ನುಡಿಯುತ್ತಿದ್ದೇನೆ. ದೋಷಾರೋಪಣಾ ಪಟ್ಟಿ ಕೆಎ-25 ಎಬಿ-6633 ಮೇಲೆ ಇದೆ ಅಂದರೆ ಸರಿಯಲ್ಲ. ಅಪಘಾತ ದ ಕಾಲಕ್ಕೆ ಡಿ ಎಲ್ ಹಾಗೂ ವಿಮೆ ಚಾಲ್ತಿಯಲ್ಲಿತ್ತು ಅಂದರೆ ಸರಿಯಲ್ಲ. ದೋಷಾರೋಪಣಾ ಪಟ್ಟಿ ಯಲ್ಲಿ ವಿಮೆ ಹಾಗೂ ಡಿ ಎಲ್ ಇಲ್ಲವೆಂದು ನಮೂದು ಮಾಡಿಲ್ಲ ಅಂದರೆ, ತಪ್ಪಾಗಿ ನಮೂದು ಮಾಡಿಲ್ಲವೆಂದು ಹೇಳುತ್ತಾರೆ. ಅಪಘಾತ ದ ಕಾಲಕ್ಕೆ 2 ನೇ ಎದುರುದಾರರ ಕಂಪನಿಯಲ್ಲಿ ವಿಮೆ ಚಾಲ್ತಿಯಲ್ಲಿತ್ತು ಅಂದರೆ ಸರಿಯಲ್ಲ. ಅಪಘಾತ ವು ದಿಃ 3.12.2023 ರಂದು ಆಗಿದೆ. ಸಾಕ್ಷಿಗೆ ಈಗ ಒಂದು ಜರಾಕ್ಸ ಪ್ರತಿ ತೋರಿಸಲಾಗಿ, ಅದನ್ನು ಒಪ್ಪಿಕೊಳ್ಳುವುದಿಲ್ಲವೆಂದು ಹೇಳುತ್ತಾರೆ. ವಿಮೆ ಪ್ರತಿ ಎರಡನೇ ಎದುರುದಾರರ ಕಂಪನಿಯಲ್ಲಿ ನಮೂದು ಇಲ್ಲವೆಂದು ಹಾಗೂ ಅದು ಖೊಟ್ಟಿ ಇದೆ ಅಂತಾ ದೂರು ನೀಡಿಲ್ಲ. ಸಾರ್ವಜನಿಕರಿಗೆ ಮೋಸ ಮಾಡಲು ಹಾಗೂ ವಿಮೆ ಹಣ ಕೊಡಬಾರದೆಂದು ನಮ್ಮ ಕಂಪನಿಯವರು ಮೋಸ ಮಾಡುತ್ತಾರೆ ಅಂದರೆ ಸರಿಯಲ್ಲ. ನಮ್ಮ ಕಂಪನಿಯಿಂದ ಚಾಲಕ ಹಾಗೂ ಮಾಲಿಕನಿಗೆ ನೋಟಿಸು ಕಳಿಸಿದ್ದೇವೆ. ಅದಕ್ಕೆ ಸಂಬಂಧಪಟ್ಟಂತೆ ದಾಖಲೆ ಹಾಜರಪಡಿಸಿಲ್ಲ, ಮುಂದೆ ಹಾಜರಪಡಿಸುತ್ತೇನೆ. ನಮ್ಮ ಕಂಪನಿಯಲ್ಲಿ ವಿಮೆ ಇರುವುದರಿಂದ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ಇಫ್ಕೋ ಟೋಕಿಯೋ ಕಂಪನಿಯಲ್ಲಿ ಅಪಘಾತ ವಾದ ನಂತರ ಮಾಡಿದ ವಿಮೆ ಪ್ರತಿ ಹಾಜರಪಡಿಸಿದ್ದೇನೆ ಅಂದರೆ ಸರಿ. 2 ನೇ ಎದುರುದಾರರ ಕಂಪನಿಯಲ್ಲಿ ವಿಮೆ ಇಲ್ಲದ ಕಾರಣ ಅಲ್ಲಿ ಮಾಡಿಸಿದ್ದಾರೆಂದು ಹೇಳುತ್ತಾರೆ. ನಿಆರ್ - 2 ನ್ನು ಇಫ್ಕೋ ಟೋಕಿಯೋ ಕಂಪನಿಯಿಂದ ಪಡೆದಿಲ್ಲ, ಕಂಪ್ಯೂಟರ ಮೂಲಕ ತೆಗೆದುಕೊಂಡಿದ್ದೇವೆ. ಅಪಘಾತ ವಾದ ನಂತರ ವಿಮೆ ಕೊಡಬಾರದೆಂದು ನಾವು ಅದನ್ನು ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ.

**MVC 79-24** **RW-1**

ಇಫ್ಕೋ ಟೋಕಿಯೋ ಕಂಪನಿಯಲ್ಲಿ ವಿಮೆ ಇದ್ದ ಬಗ್ಗೆ ದಾಖಲೆ ಹಾಜರಪಡಿಸಿದ್ದೇನೆ ಹಾಗೂ ಆರ್ ಟಿ ಓ ದವರಿಗೆ ನೋಟಿಸು ಕೊಟ್ಟಿದ್ದೇವೆ, ಅದರ ಪ್ರತಿ ಹಾಜರಪಡಿಸಿಲ್ಲ. ನಾವು ಯಾವುದೇ ನೋಟಿಸು ಕೊಟ್ಟಿಲ್ಲ, ಆ ಕಾರಣದಿಂದ ಅದನ್ನು ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ದೋಷಾರೋಪಣಾ ಪಟ್ಟಿ ನಮ್ಮ ವಿಮೆ ಕಂಪನಿ ವಾಹನದ ಮೇಲಿರುವುದರಿಂದ ಪರಿಹಾರ ಕೊಡಲು ಬಾಧ್ಯಸ್ಥರು ಅಂದರೆ ಸರಿಯಲ್ಲ. ನಾವೇ ಸೃಷ್ಟಿ ಮಾಡಿ ವಿಮೆ ಪ್ರತಿ ಹಾಜರಪಡಿಸಿದ್ದೇವೆ ಅಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿರುವ ವಿಷಯಗಳು ಸುಳ್ಳು ಇವೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.